**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಸೇಡಂ**

**CC No. 356/2024**

**(ಇಂದು ದಿಃ 02-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ಕಿಷ್ಟಪ್ಪ | CW-8 | PW-7 |
| ತಂದೆ/ಗಂಡನ ಹೆಸರು | ಬಾಲಯ್ಯ ಜೋಗಿ | | |
| ವಯಸ್ಸು | 40 ವರ್ಷ | | |
| ಉದ್ಯೋಗ | ಒಕ್ಕಲುತನ | | |
| ವಾಸ ಸ್ಥಳ | ಚಿಟ್ಕನಪಲ್ಲಿ ತಾಃ ಸೆಡೇಂ | | |

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭೀಯೋಜಕರಿಂದಃ-**

ನನಗೆ ಚಾಸಾ-1 ರಿಂದ 7 ಮತ್ತು 9ರವರು ಪರಿಚಯ ಇರುತ್ತದೆ. ಆರೋಪಿಗಳ ಪರಿಚಯ ಇರುತ್ತದೆ. ನಾನು 2013ನೇ ಇಸ್ವಿಯಲ್ಲಿ ದಿನಾಂಕ ತಿಂಗಳು ನೆನಪಿರುವುದಿಲ್ಲ, ನಾನು ದೇವಸ್ಥಾನಕ್ಕೆ ಹುಣ್ಣಿಮೆ ಇದ್ದುದರಿಂದ ಪೂಜೆ ಮಾಡಿಸಿಕೊಂಡು ಬರಲು ಮಾಶಮ್ಮ ದೇವಸ್ಥಾನಕ್ಕೆ ಹೋಗಿರುತ್ತೇನೆ. ಆ ಸಮಯದಲ್ಲಿ 1ನೇ ಆರೋಪಿ ಹಾಗೂ ಆತನ ಜೊತೆಗೆ ಆಂದ್ರಪ್ರದೇಶದ 4 ಜನರು ಸೇರಿ ಅಲ್ಲಿ ಹುತ್ತವನ್ನು ಅಗೆಯುತ್ತಿದ್ದರು. ಆಗ ನಾನು ಹಾಗೂ ಊರಿನ ಜನರು ಅವರನ್ನು ಏಕೆ ಹುತ್ತವನ್ನು ಅಗೆಯುತ್ತಿದ್ದೀರಿ ಎಂದು ವಿಚಾರಣೆ ಮಾಡಲಾಗಿ ಆಗ ನಮ್ಮ ಮತ್ತು ಅವರ ನಡುವೆ ಮಾತಿಗೆ ಮಾತು ಬೆಳೆದಿರುತ್ತದೆ. ಆ ಸಮಯದಲ್ಲಿ 1ನೇ ಆರೋಪಿ ನಮ್ಮನ್ನು ಇಲ್ಲಿ ನಿಧಿ ಇದೆ ಅಗೆಯಿರಿ ಎಂದು ಕರೆಯಿಸಿರುತ್ತಾರೆ ಎಂದು ಉಳಿದ ಆರೋಪಿಗಳು ಹೇಳಿರುತ್ತಾರೆ. 2ರಿಂದ 5ನೇ ಆರೋಪಿಗಳು ಕಾರು ನಂಬರ ಎಪಿ-22 ಎಜಿ 5732ನೆದರಲ್ಲಿ ಅಲ್ಲಿಗೆ ಬಂದಿದ್ದರು . ಆಗ ನಾವೆಲ್ಲರೂ ಸೇರಿ ಅವರನ್ನು ಪೋಲಿಸಠಾಣೆಗೆ ಸಂಜೆ 6-30ಗಂಟೆಗೆ ಕರೆದುಕೊಂಡು ಹೋಗಿರುತ್ತೇವೆ. ಈ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇವೆ. ಆರೋಪಿಗಳು ಈ ರೀತಿ ಮಾಡಿದ್ದರಿಂದ ನಮ್ಮ ಧಾರ್ಮಿಕ ಭಾವನೆಗೆ ಧಕ್ಕೆ ಉಂಟಾಗಿರುತ್ತದೆ.

**(ಈ ಹಂತದಲ್ಲಿ ಸ.ಸ.ಅ. ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲುಃ- ಸಹಾಯಕ ಸರ್ಕಾರಿ ಅಭೀಯೋಜಕರಿಂದಃ-**

ಘಟನೆ ದಿಃ 05-11-2013 ರಂದು ಮಧ್ಯಹ್ನಾ 2 ಗಂಟೆ ಸುಮಾರಿಗೆ ಮಾಶಮ್ಮ ಗರ್ಭಗುಡಿಯಲ್ಲಿದ್ದ ಹುತ್ತವನ್ನು ಆರೋಪಿಗಳು ಅಗೆಯುತ್ತಿದ್ದರು ಎಂದರೆ ಸರಿ. ಆರೋಪಿಗಳು ದೇವಸ್ಥಾನದ ಒಳಗಡೆ ಇದ್ದ ಹುತ್ತವನ್ನು ಅಗೆಯುತ್ತಿದ್ದರು ಎಂದರೆ ಸರಿ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ ಎಸ್ ಬಿ ಎಮ್ ವಕೀಲರಿಂದಃ -**

ನಾನು ಬಿಎ ಬಿ.ಎಡ್ ಪದವಿಧರನಿರುತ್ತೇನೆ. ನಾನು ಪೋಲಿಸರ ಮುಂದೆ ಹೇಳಿಕೆಯನ್ನು ಲಿಖಿತವಾಗಿ ನೀಡಿರುತ್ತೇನೆ. ಹುಣ್ಣಿಮೆ ದಿನದಂತು ದೇವಸ್ಥಾನಕ್ಕೆ ಸಾಕಷ್ಟು ಜನರು ಪೂಜೆ ಮಾಡಿಸಲು ಬರುತ್ತಾರೆ ಎಂದರೆ ಸರಿ. 1ನೇ ಆರೋಪಿ ಮಾಶಮ್ಮ ದೇವಸ್ಥಾನದ ಪೂಜಾರಿ ಆಗಿದ್ದರು ಎಂದರೆ ಸರಿ. 1ನೇ ಆರೋಪಿ 1994ರಲ್ಲಿ ಸದರಿ ದೇವಸ್ಥಾನಕ್ಕೆ ಟ್ರಸ್ಟ ಕಮೀಟಿಮಾಡಿ ಅದಕ್ಕೆ ಅಧ್ಯಕ್ಷರಾಗಿದ್ದರು ಎಂದರೆ ಸರಿ.

1ನೇ ಆರೋಪಿ ಮಾಶಮ್ಮ ದೇವಸ್ಥಾನದ ಜೀರ್ಣೋಧಾರಕ್ಕಾಗಿ ಹಳೆ ಗುಡಿಯನ್ನು ಕೆಡವಿ ಹೊಸ ಗುಡಿ ಕಟ್ಟಿಸಬೇಕೆಂದು ರೂ.15 ಲಕ್ಷಗಳನ್ನು ಎಮ್.ಎಲ್.ಎ. ಕಡೆಯವರಿಂದ ಅನುದಾನ ಬಂದಿತ್ತು ಎಂದರೆ ನನಗೆ ಸರಿ. ಮಾಶಮ್ಮ ದೇವಸ್ಥಾನದ ಪಕ್ಕದಲ್ಲಿ ಜನರು ತಿಪ್ಪಿಗುಂಡಿ ಮಾಡಿಕೊಂಡಿದ್ದರು ಎಂದರೆ ಸರಿ. ಮಾಶಮ್ಮ ದೇವಸ್ಥಾನದ ಅಕ್ಕಪಕ್ಕ ಚಾಸಾ-1 ರಿಂದ 7 ಹಾಗೂ 9ರವರು ತಿಪ್ಪಿ ಗುಂಡಿ ಹಾಕಿಕೊಂಡಿದ್ದರು ಎಂದರೆ ಸರಿಯಲ್ಲ, ಸದರಿ ತಿಪ್ಪಿ ಗುಂಡಿಯನ್ನು ತೆರವುಗೊಳಿಸಲು 1ನೇ ಆರೋಪಿ ಅವರಗೆಲ್ಲಾ ವಿನಂತಿಸಿಕೊಂಡಿದ್ದರು ಎಂದರೆ ಸರಿಯಲ್ಲ, 1ನೇ ಆರೋಪಿ ಕಾಂಗ್ರೇಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದರು ಎಂದರೆ ಸರಿ. ಆರೋಪಿಗಳು ಹುತ್ತವನ್ನು ಅಗೆಯುವ ಸಂಧರ್ಭದಲ್ಲಿ ನಾನು, ಭೀಮರೆಡ್ಡಿ, ಚಂದ್ರಕಾಂತ, ಮಲ್ಲಿಕಾರ್ಜುನ, ಕೇಶಪ್ಪ, ಚಂದ್ರಪ್ಪ ಇದ್ದೇವು. ಆ ಸಮಯದಲ್ಲಿ ನಾವೇಲ್ಲರೂ ಇದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮಾಶಮ್ಮ ದೇವಸ್ಥಾನ ಊರಿಗೆ ಸಮೀಪದಲ್ಲಿ ಇರುತ್ತದೆ ಎಂದರೆ ಸರಿ. ನಿಧಿ ಕಳ್ಳತನ ಮಾಡುವವರು ರಾತ್ರಿ ಸಮಯದಲ್ಲಿ ಕಳ್ಳತನ ಮಾಡುತ್ತಾರೆ ಎಂದರೆ ಸಾಕ್ಷಿಯು ಆರೋಪಿಗಳು ಮಧ್ಯಾಹ್ನ ಬಂದಿದ್ದರು ಎನ್ನುತ್ತಾರೆ. ಆರೋಪಿ 1 ರಿಂದ 5 ರವರು ಬಡಿಗತನ ಕೆಲಸ ಮಾಡುವವರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಆರೋಪಿಗಳು

ಯಾವುದೇ ನಿಧಿ ಕಳವು ಮಾಡಲು ಬಂದಿರಲಿಲ್ಲ ಎಂದರೆ ಸರಿಯಲ್ಲ, ಆರೋಪಿಗಳು ಆ ದಿನ ಹುಣ್ಣಿಮೆ ಇದ್ದುದ್ದರಿಂದ ಒಳೆಯ ದಿನ ಇರುತ್ತದೆ ಎಂದು ದೇವಸ್ಥಾನದ ಜೀರ್ಣೋಧಾರಕ್ಕೆ ಹೊಸ ಗುಡಿಕಟ್ಟಿಸಲು ಪಾಯ ತೊಡಲು ಬಂದಿದ್ದರು ಎಂದರೆ ಸರಿಯಲ್ಲ, ಆರೋಪಿಗಳು ದೇವಸ್ಥಾನದ ಸುತ್ತಲು ಇರುವ ತಿಪ್ಪಿ ಗುಂಡಿಗಳನ್ನು ತೆರವು ಗೊಳಿಸಲು ಹೇಳಿದ್ದರಿಂದ ಅವರ ವಿರುದ್ಧ ಚಾಸಾ-1ರವರು ಸುಳ್ಳು ದೂರನ್ನು ದಾಖಲಿಸಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ, ಆರೋಪಿಗಳ ವಿರುದ್ಧ ಯಾವುದೇ ಅಪರಾಧವನ್ನು ಮಾಡದೇ ಇದ್ದರು ಸಹ ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ, ಸೇಡಂ.**